ಮೆಡಿಕೇಶನ್ ನೀಡಲಾಗುತ್ತಿತ್ತು. ಮಿಡಲ್ ಸ್ಕೂಲ್ ಓದುವಾಗ ಅಮ್ಮ ಉಸಿರು ಕಳೆದುಕೊಂಡಿದ್ದಳು. ನನ್ನ ಯೋಚನೆಯಲ್ಲಿಯೇ ಅಮ್ಮ ಬದುಕಿನ ಆಸೆ ಕಳೆದುಕೊಂಡಿದ್ದಳಂತೆ. ಅಮ್ಮ ಸತ್ತ ದಿನದಿಂದಲೇ ನನ್ನಲ್ಲಿ ಬದುಕುವ ಛಲ ಬಲವಾಯಿತು. ಮನುಷ್ಯನಿಗೆ ಅತ್ಯಂತವಾಗಿ ಬೇಡವಾದ ಸಂಗತಿಯೆಂದರೆ ಸಾವು. ನನ್ನಲ್ಲಿ ಹಸಿವು ಹುಟ್ಟಲು, ಉತ್ಸಾಹ ಹುಟ್ಟಲು, ಆಸೆ ಹುಟ್ಟಲು, ವಿಪರೀತವಾಗಿ ಔಷಧಿಗಳ ಮೊರೆ ಹೋಗಬೇಕಾಯಿತು. ನನ್ನನ್ನು ನಾನು ಜಯಿಸಲು ಅಪ್ಪ ತನ್ನ ಇತರೆ ವ್ಯಾಪಾರದೊಂದಿಗೆ ಔಷಧಿ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿದ. ಮತ್ತು ಅದರ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದ. ಅದು ವಿಪರೀತ ಫ್ಲರಿಶ್ ಆಯಿತು. ಎಷ್ಟೊಂದು ಲಾಭ, ಎಷ್ಟೊಂದು ದುಡ್ಡು. ಆದರೂ ನನ್ನ ಕರುಳಿನ ಕ್ರಿಯಾ ಶೀಲತೆಯನ್ನು ಬಲಗೊಳಿಸಲು ಸಾಧ್ಯವಾಗಲಿಲ್ಲ. ಶುಗರ್ ಲೆವೆಲ್ variation ದೇಹದಲ್ಲಿ ಸದಾ ದೊಡ್ಡ ಪ್ರಮಾಣದಲ್ಲಿ ಆಗುತ್ತಿರುತ್ತದೆ. ಹಾಗಾಗಿ ವಿಪರೀತ ಎಚ್ಚರಿಕೆಯಿಂದ ಇರಬೇಕು. ಎಷ್ಟೊಂದು ದೇವರುಗಳನ್ನು ಮೊರೆ ಹೋಗಿದ್ದು, ಎಷ್ಟೊಂದು ಔಷಧಿಗಳನ್ನು ಪ್ರಯೋಗಿಸಿದ್ದು. ಏನು ಮಾಡಿದರೂ ನನ್ನ ಶುಗರ್ ಲೆವೆಲ್ ನಾರ್ಮಲ್ ಆಗಲಿಲ್ಲ. ಒಮ್ಮೆಯೂ ಡ್ರಿಂಕ್ಸ್ ತೆಗೆದುಕೊಂಡಿಲ್ಲ, ಸ್ಮೋಕ್ ಮಾಡಿಲ್ಲ, ಇಷ್ಟವಾದದ್ದನ್ನು ಹೊಟ್ಟೆ ತುಂಬಾ ತಿಂದಿಲ್ಲ, ಲೈಂಗಿಕ ಸುಖ ಅನುಭವಿಸಿಲ್ಲ. ಐಯಾಮ್ ದ ಪೂರೆಸ್ಟ್ ಆಫ್ ದ ರಿಚ್. ಆದ್ದರಿಂದಲೇ ನನಗೆ ಕರ್ಮ ಸಿದ್ಧಾಂತದ ಬಗ್ಗೆ ನಂಬಿಕೆ ಹುಟ್ಟತೊಡಗಿದೆ. ಹೌವೆವರ್, ಮೊನ್ನೆ ನೀವು ಬೆಂಗಳೂರಿನಿಂದ ಬರುವಾಗ ನನ್ನ ಪಕ್ಕದಲ್ಲಿ ಕುಳಿತು ಮಾತನಾಡಿದಾಗ, ನಾನು ನಿಮ್ಮ ಕೈ ಹಿಡಿದು ಸಾರಿ ಕೇಳಿದಾಗ ನನ್ನಲ್ಲಿ ಹಿಂದೆಂದೂ ಕಾಣದ ಒಂದಿಷ್ಟು ಚೈತನ್ಯ ಮೂಡಿದ ಬಗ್ಗೆ ತುಂಬಾ ಆಚ್ಚರಿಯಾಗಿತ್ತು. ನಿಮ್ಮಲ್ಲಿ ಎಂತಹುದೋ ಅದ್ಭುತವಾದ ಶಕ್ತಿಯಿದೆಯೆನಿಸುತ್ತಿದೆ. ನೀವು ಮುಂಬಯಿಯಲ್ಲಾಗಲೀ, ಬೆಂಗಳೂರಿನಲ್ಲಾಗಲೀ ರೆಸ್ಟ್ ತೆಗೆದುಕೊಳ್ಳಬೇಕಾದಲ್ಲಿ ಅಥವಾ ಉಳಿಯಬೇಕಾದಲ್ಲಿ ನಮ್ಮ ಕಂಪನಿಯ ಲಕ್ಷುರಿ ಗೆಸ್ಟ್ ಹೌಸ್‌ಗಳಿವೆ. ಸಂಕೋಚ ಪಡದೆ ಪರ್ಮನೆಂಟಾಗಿ ಅವುಗಳನ್ನು ನೀವು ಉಪಯೋಗಿಸಿಕೊಳ್ಳಬಹುದು. ಇದಕ್ಕಾಗಿ ನಿಮ್ಮಿಂದ ಪ್ರತಿಫಲವನ್ನೇನೂ ಬಯಸುವುದಿಲ್ಲ' ಅವನ ಮಾತು ಮತ್ತು ಮುಖದಲ್ಲಿ ಒಂದಿಷ್ಟು ಹೊಳಪು ಮೂಡಿದ್ದು ಅವಳ ಗಮನಕ್ಕೆ ಬಂದು ಖುಷಿಗೊಂಡವಳು 'ಥ್ಯಾಂಕ್ಸ್ ಎ ಲಾಟ್ ಫಾರ್ ಯುವರ್ ಮ್ಯಾಗ್ನಾನಿಮಿಟಿ. ನನಗೆ ಬಾಂದ್ರಾದಲ್ಲಿಯೇ ಅಂದರೆ ಇಲ್ಲಿಗೆ ನಾಲ್ಕು ಕಿಲೋಮೀಟರ್ ದೂರದ ಗೆಲಾಕ್ಸಿ ಅಪಾರ್ಟ್ಮೆಂಟ್‌ನಲ್ಲಿ ತ್ರೀ ಬೆಡ್ ರೂಮಿನ ದೊಡ್ಡ ಲಕ್ಷುರಿ ಫ್ಲ್ಯಾಟ್ ಇದೆ. ಅದೇ ಫ್ಲೋರ್‌ನಲ್ಲಿ ಡಾನ್ಸರ್, ಸಿನಿಸ್ಟಾರ್ ಹೆಲೆನ್ ಕೂಡಾ ಇದಾರೆ. ಅವರು ಅಮ್ಮನಿಗೆ ಕ್ಲೋಸ್ ಫ್ರೆಂಡ್ ಆಗಿದ್ದರು. ನನ್ನ ಮಗಳು ಲಂಡನ್ನಲ್ಲಿ ಸ್ಟಡಿ ಮಾಡುತ್ತಿರುವುದರಿಂದ ನನಗೊಬ್ಬಳಿಗೇ ಅಷ್ಟೊಂದು ದೊಡ್ಡ ಮನೆ ಏಕೆಂದು ಅದನ್ನು ಮೂರೂವರೆ ಲಕ್ಷಕ್ಕೆ ಬಾಡಿಗೆಗೆ ಕೊಟ್ಟು ಅಂಧೇರಿಯಲ್ಲಿ ಸಿಂಗಲ್ ಫ್ಲ್ಯಾಟ್‌ನಲ್ಲಿ ಇದ್ದೀನಿ. ಹಾಗೆಯೇ ಬೆಂಗಳೂರಿನ ದೇವನಹಳ್ಳಿಯ ಸಟ್ವಾ ಅಪಾರ್ಟ್ಮೆಂಟ್‌ನಲ್ಲೂ ಒಂದು ಸ್ವಂತ ಸಿಂಗಲ್ ಬೆಡ್ ರೂಮ್ ಫ್ಲ್ಯಾಟ್ ಇದೆ. ಐಯಾಮ್ ಕಂಫರ್ಟಬಲ್ ಎನಫ್. ಬಟ್...' ಎಂದು ಮಾತು ನಿಲ್ಲಿಸಿದಳು. 'ಏನೋ ಹೇಳಲು ಹೋದಿರಿ ?' ಕೇಳಿದ ಸಿದ್ಧಾರ್ಥ ಕುಮಾರ್. 'ಸಮಯ ಎರಡೂವರೆ ಗಂಟೆಯಾಗಿದೆ, ನಾನು ಹೊರಡುತ್ತೇನೆ. ಮತ್ತೊಮ್ಮೆ ಸಿಗುತ್ತೇನೆ, ಆಗ ಹೇಳುತ್ತೇನೆ. ನೀವು ಪಿಸಿಕಲಿ ಬಾದರ್ಡ್, ನಾನು ಮೆಂಟಲಿ ಬಾದರ್ಡ್' ಸ್ಮಿತಾ ಶರ್ವಾಣಿ ಹೊರಟು ನಿಂತಳು. ತನ್ನ ಕಂಪನಿಯ ಕಾರಿನಲ್ಲಿ ಡ್ರಾಪ್ ತೆಗೆದು ಕೊಳ್ಳಲು ಸಿದ್ಧಾರ್ಥ ಒತ್ತಾಯಿಸಿದ. ಅವನ ಒತ್ತಾಯಕ್ಕೆ ಅವಳು ಮಣಿದಳು. ಚೀಫ್ ಸೆಕ್ಯೂರಿಟಿ ಬಂದು ಅವಳನ್ನು ಕಾರಿನ ಬಳಿಗೆ ಕರೆದೊಯ್ದ. ಅದು ಸಿದ್ಧಾರ್ಥ ಕುಮಾರ್ ಓಡಾಡಲು ಬಳಸುವ ರೋಲ್ಸ್ ರಾಯ್ಸ್ ಫ್ಯಾಂಟಮ್ ಕಾರ್. ಕಾರಲ್ಲಿ ಕುಂತವಳನ್ನು ಫೆರಾರಿ ರೆಡ್ ಸೆಂಟಿನ ಸುವಾಸನೆ ಆವರಿಸಿಕೊಂಡಿತ್ತು.

ಇದಾಗಿ ಇಪ್ಪತ್ತೈದು ದಿನಗಳ ಕಾಲ ಸಿದ್ಧಾರ್ಥ ಕುಮಾರ್ ವಿಮಾನದಲ್ಲಿ ಬೆಂಗಳೂರಿನಿಂದ ಮುಂಬಯಿಗಾಗಲೀ, ಮುಂಬಯಿಯಿಂದ ಬೆಂಗಳೂರಿಗಾಗಲೀ ಪ್ರಯಾಣಿಸಿದ್ದು ಅವಳ ಕಣ್ಣಿಗೆ ಬೀಳಲಿಲ್ಲ. ಒಂದು ವರ್ಷದ ಅವನ ಪ್ರಯಾಣದಲ್ಲಿ ಇಷ್ಟೊಂದು ದೊಡ್ಡ ಗ್ಯಾಪ್ ಯಾವಾಗಲೂ ಆಗಿರಲಿಲ್ಲ. ಅವನ ಆರೋಗ್ಯದ ಬಗ್ಗೆ ತಿಳಿದುಕೊಂಡಿದ್ದ ಅವಳಿಗೆ ಸಹಜವಾಗಿಯೇ ಆತಂಕ ಮೂಡಿತ್ತು. ಅವನು ಕೊಟ್ಟಿದ್ದ